ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ಅಪಘಾತವಾದ ಬಗ್ಗೆ ದೂರನ್ನು ನನ್ನ ತಂದೆ ನೀಡಿರುತ್ತಾರೆ. ನನ್ನ ತಂದೆ ಅಪಘಾತವನ್ನು ನೋಡಿಲ್ಲ ಆದರೇ ಅಪಘಾತವನ್ನು ಕಣ್ಣಾರೆ ನೋಡಿದವರು ನನ್ನ ತಂದೆಗೆ ಹೇಳಿದ್ದಾರೆ. ನಾನು ಮೋಟಾರ್ ಸೈಕಲ್ ನಲ್ಲಿ ಹೋಗುವಾಗ ಅಪಘಾತವಾಗಿದೆ ಎಂದರೆ ಸರಿ. ನನಗೆ ಮೋಟಾರ್ ಸೈಕಲ್ ಓಡಿಸಲು ಡಿ.ಎಲ್ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ಅಪಘಾತವಾದ ನಂತರ ನಾನು ಮೊದಲಿಗೆ ಮಾಗಡಿ ಸರ್ಕಾರಿ ಆಸ್ಪತ್ರೆಗೆ ಹೋಗಿ ನಂತರ ನಾರಾಯಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಪಘಾತವಾದ ಬಗ್ಗೆ ಆಸ್ಪತ್ರೆಯಲ್ಲಿ ಹೇಳಿ ಬರೆಸಿರುತ್ತೇನೆ. ಅಪಘಾತವು ಬೇರೆ ಯಾವುದೋ ಒಂದು ವಾಹನದಿಂದ ಆಗಿದೆ ಆದ್ದರಿಂದ ನಾನು 4 ದಿನ ತಡವಾಗಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು 1ನೇ ಎದುರುದಾರರ ಜೊತೆ ಸೇರಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆಟೋ ಮಾಲೀಕ ನನಗೆ ಪರಿಚಯ ಇಲ್ಲ. ಇದೇ ವಾಹನದಿಂದ ಆಪಘಾತವಾಗಿದೆ ಎಂದು ನಾನು ದೂರಿನಲ್ಲಿ ಹೇಳಿರುತ್ತೇನೆ.

ನನಗೆ ಚಿಕಿತ್ಸೆ ನೀಡಿದ ವೈದ್ಯರ ಸಾಕ್ಷಿ ನುಡಿಸುತ್ತೇನೆ. ನನಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ಪೊಲೀಸರು ಸಲ್ಲಿಸಿರುವ ಅಂತಿಮ ವರದಿಯ ಬಗ್ಗೆ

ನಾನು ತಿಳಿದುಕೊಂಡಿರುತ್ತೇನೆ. ಪೊಲೀಸರು ಕುಲಂಕುಷವಾಗಿ ತನಿಖೆ ಮಾಡಿ ದೋಷಾಣರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಅಪಘಾತವಾಗಿಲ್ಲದೇ ಇದ್ದರೂ ಸಹ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಎಕ್ಸರೇ ಗಳನ್ನು ನ್ಯಾಯಾಲಯಕ್ಕೆ ಹಾಜರುಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಈಗಲೂ ಅಲ್ಲೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ 15 ಸಾವಿರ ಸಂಪಾದನೆ ಮಾಡುತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ ಗಳನ್ನು ಈ ಕೇಸಿಗಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ ಗಳಿಗೆ ಪೂರಕವಾದ ಸಲಹಾ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ದೈಹಿಕ ಮತ್ತು ಆರ್ಥಿಕ ನಷ್ಟ ಉಂಟಾಗಿಲ್ಲದೇ ಇದ್ದರೂ ಸಹ ಪರಿಹಾರ ಹಣ ಪಡೆಯುವ ಸಲುವಾಗಿ ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು